ಶ್ರೀ ಮಳ್ಳೂರು ಆನಂದರಾವ್.—ಈ ವಿಚಾರದಲ್ಲಿ ಎಲ್ಲಾ ಟೀಚರ್‌ಗಳು ಪೋಲೀಸ್‌ಗೆ ಕಂಪ್ಲೈಂಟ್ ಕೊಟ್ಟಿದ್ದಾರೆ. ಮ್ಯಾನೇಜ್ ಮೆಂಟಿನವರು ಗುಂಡಾಗಳನ್ನು ಬಿಟ್ಟು ಹೆಣ್ಣು ಮಕ್ಕಳ ಮೇಲೆ ಹಲ್ಲೆ ನಡೆಸುತ್ತಿದ್ದಾರೆ. ಈ ಬಗ್ಗೆ ತಾವು ಬೇಗನೆ ಸರ್ಕಾರದವರಿಂದ ಉತ್ತರವನ್ನು ತರಿಸಿ ಕೊಡಬೇಕು.

ಶ್ರೀ ವಿ. ಎಂ. ಘಾಡಿ.—ಸ್ವಾಮಿ, ದಾಂಡೇಲಿಯಲ್ಲಿ ಮುನಿಸಿಪಲ್ ಪ್ರೆಸಿಡೆಂಟ್‌ರವರ ಮನೆಗೆ ಯಾರೋ ಕೆಲವರು ಬೆಂಕಿ ಹಾಕಿದ್ದಾರೆ. ಈ ಬಗ್ಗೆ ನಾನು ಒಂದು ಕಾಲಿಂಗ್ ಅಟೆನ್‌ಷನ್ ನೋಟೀಸ್ ಕಳಿಸಿದ್ದೇನೆ. ನನಗೆ ಇನ್ನೂ ಉತ್ತರ ಬಂದಿಲ್ಲ. ಪೋಲೀಸರು ಏನು ಕ್ರಮ ತೆಗೆದುಕೊಂಡಿದ್ದಾರೆಯೋ ಗೊತ್ತಿಲ್ಲ. ಇದನ್ನು ಬೇಗ ಇಲ್ಲಿ ಹಾಕಿಸಿ, ನನಗೆ ಸರ್ಕಾರದವರಿಂದ ಉತ್ತರ ಕೊಡಿಸಬೇಕೆಂದು ಕೇಳಿ ಕೊಳ್ಳುತ್ತೇನೆ.

MR. SPEAKER.—I shall look into it.

ಶ್ರೀ ಜೆ. ಡಿ. ಸೋಮಪ್ಪ.—ಸ್ವಾಮಿ, ನಮ್ಮ ಕಡೆ ಈ ನಾಯಕ, ಜೇನುಕುರುಬ, ಕಾಡು ಕುರುಬ ಜನಾಂಗದ ವಿದ್ಯಾರ್ಥಿಗಳು ೨-೩ ವರ್ಷಗಳಿಂದ ಕಾಲೇಜುಗಳಲ್ಲಿ, ಶಾಲೆಗಳಲ್ಲಿ, ಹಾಸ್ಟಲ್‌ಗಳಲ್ಲಿ ಎಲ್ಲಾ ಸವಲತ್ತುಗಳನ್ನು ಪಡೆಯುತ್ತಿದ್ದರು. ಇತ್ತೀಚೆಗೆ ಸೋಷಿಯಲ್ ವೆಲ್‌ಫೇರ್ ಡೈರೆಕ್ಟರ್‌ರವರು ಈ ನಾಯಕ ಜೇನುಕುರುಬ, ಕಾಡುಕುರುಬ ಜನಾಂಗವೇ ಇಲ್ಲ, ಅವರಿಗೆ ಎಲ್ಲಾ ಸವಲತ್ತುಗಳನ್ನು ನಿಲ್ಲಿಸ ಬೇಕು ಎಂದು ಹೇಳಿ ಹಠಾತ್ತನೆ ಡೈರೆಕ್ಷನ್ ಕೊಟ್ಟಿದ್ದಾರೆ. ಈಗ ಅವರಿಗೆ ಎಲ್ಲಾ ಸವಲತ್ತುಗಳೂ ನಿಂತು ಬಿಟ್ಟಿದೆ. ಸ್ಕೂಲ್ ಕಾಲೇಜುಗಳಲ್ಲಿ ಸ್ಕಾಲರ್‌ಷಿಪ್ ಕೊಡುವುದನ್ನು ನಿಲ್ಲಿಸಿದ್ದಾರೆ, ಹಾಸ್ಟಲ್‌ಗಳಲ್ಲಿ ಊಟವನ್ನು ಕೊಡುತ್ತಾ ಇಲ್ಲ. ಈಗ ಪರೀಕ್ಷೆ ಹತ್ತಿರ ಬಂದಿದೆ. ಹಾಸ್ಟಲ್‌ಗಳಲ್ಲಿ ಆ ವಿದ್ಯಾರ್ಥಿಗಳಿಗೆ ಸರ್ಕಾರದಿಂದ ಈ ಬಗ್ಗೆ ಪ್ರಾಪ್ತಿಯನ್ನು ತಂದರೆ ಊಟ ಕೊಡುತ್ತೇವೆ ಎಂದು ಹೇಳುತ್ತಿದ್ದಾರೆ. ಇವತ್ತಿನ ದಿವಸ ವಿದ್ಯಾರ್ಥಿಗಳೆಲ್ಲಾ ಭೀತಿಗೆ ಒಳಗಾಗಿದ್ದಾರೆ. ಪ್ರತಿಯೊಂದು ಜಿಲ್ಲೆಯಲ್ಲೂ ಕೂಡ ಈ ಎಲ್ಲಾ ಜನಾಂಗದ ವಿದ್ಯಾರ್ಥಿಗಳು ಸಾಕಷ್ಟು ಕಷ್ಟ ಪಡುತ್ತಿದ್ದಾರೆ. ಈ ಬಗ್ಗೆ ನಾವು ೮-೧೦ ಶಾಸಕರು ಸೇರಿಸಿಕೊಂಡು ಒಂದು ಕಾಲಿಂಗ್ ಅಟೆನ್‌ಷನ್ ನೋಟೀಸ್ ಕಳಿಸಿದ್ದೇವೆ. ಈ ಬಗ್ಗೆ ಆರ್ಜೆಂಟ್ ಆಗಿ ಸರ್ಕಾರದವರಿಂದ ಉತ್ತರ ತರಿಸಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಅಧ್ಯಕ್ಷರು.—ಅದನ್ನು ನಾನು ನೋಡಿಸುತ್ತೇನೆ.

ಶ್ರೀ ಜೆ. ಡಿ. ಸೋಮಪ್ಪ.—ಸ್ವಾಮಿ, ಈ ವಿಚಾರದಲ್ಲಿ ನಾನು ಮಾನ್ಯ ಮುಖ್ಯ ಮಂತ್ರಿಗಳಲ್ಲಿ ಕೂಡ ಕೇಳಿ ಕೊಂಡಿದ್ದೇನೆ, ಈಗಿರತಕ್ಕಂಥ ಸವಲತ್ತುಗಳನ್ನು ಪರೀಕ್ಷೆ ಮುಗಿಯುವತನಕವಾದರೂ ಮುಂದುವರಿಸಿ, ಪರೀಕ್ಷೆ ಆದಮೇಲೆ ಬೇಕಾದರೆ ಈ ಬಗ್ಗೆ ಒಂದು ವಿಚಿತ ತೀರ್ಮಾನವನ್ನು ತೆಗೆದು ಕೊಳ್ಳಿರಿ ಎಂದು ಕೇಳಿ ಕೊಂಡಿದ್ದೇನೆ. ಈ ಬಗ್ಗೆ ನಾನು ಅವರಿಗೆ ಒಂದು ರೆಪ್ರೆಸೆಂಟೇಷನ್ ಕೂಡ ಕೊಟ್ಟಿದ್ದೇನೆ.

ಅಧ್ಯಕ್ಷರು.—ಎಷ್ಟು ನೇ ತಾರೀಖು ಅದನ್ನು ಹಾಕಿಸೋಣ.

(ii) Scarcity Conditions in some Parts of the State.

ಶ್ರೀ ಎಚ್. ಟಿ. ಕೃಷ್ಣಪ್ಪ.—ಸ್ವಾಮಿ, ಮಂಡ್ಯ ಜಿಲ್ಲೆಯಲ್ಲಿರತಕ್ಕಂಥ ನೀರಾವರಿ ಪ್ರದೇಶಗಳನ್ನು ಬಿಟ್ಟರೆ ಉಳಿದ ಭಾಗಗಳೆಲ್ಲಾ ಕ್ಷಾಮಕ್ಕೆ ತುತ್ತಾಗಿವೆ. ನಾಗಮಂಗಲ, ಕೆ. ಆರ್. ಪೇಟೆ, ಪಾಂಡವಪುರ– ಈ ತಾಲ್ಲೂಕುಗಳಲ್ಲಿ ಕುಡಿಯುವ ನೀರು ಇಲ್ಲ, ಜನರಿಗೆ ತಿನ್ನುವುದಕ್ಕೆ ಆಹಾರವಿಲ್ಲ, ಕೆಲಸವನ್ನು ಕೇಳತಕ್ಕಂಥ ಜನರಿಗೆ ಕೆಲಸವನ್ನು ಕೊಡತಕ್ಕಂಥ ಪರಿಸ್ಥಿತಿ ಇಲ್ಲ, ಈ ಒಂದು ಕ್ಷಾಮ ಪರಿಸ್ಥಿತಿಯಲ್ಲೂ ಕೂಡ ಸಹಕಾರ ಸಂಘಗಳ ನೌಕರರು ಸಾಲ ವಸೂಲು ಮಾಡತಕ್ಕಂಥಾದರಲ್ಲಿ ನಿರತರಾಗಿದ್ದಾರೆ. ನಮ್ಮ ದುರ್ದೈವಕ್ಕೆ ಸಹಕಾರ ಸಂಘಗಳ ನೌಕರರು ರಾಕ್ಷಸೀಪ್ರವೃತ್ತಿಯಿಂದ ನಡೆದುಕೊಳ್ಳುತ್ತಿದ್ದಾರೆ. ೧೦-೨೦ ಸೇರು ದವಸ ಧಾನ್ಯಗಳನ್ನು ತಂದು ಹಾಕಿ ಎಂದು ತಮ್ಮಟೆ ಹೊಡೆದು ಕೊಂಡು ಆ ನೌಕರರು ಆಯಾ ಮನೆಗಳ ಮುಂದೆ ಕುಣಿಯತಕ್ಕಂಥ ಪ್ರವೃತ್ತಿಯನ್ನು ಮಾಡುತ್ತಿದ್ದಾರೆ, ಇಂತಹ ಒಂದು ದುರ್ಬರವಾದ ಪರಿಸ್ಥಿತಿ ಇದೆ. ಈ ಬಗ್ಗೆ ನಾನು ಒಂದು ಗಮನ ಸೆಳೆಯುವ ಸೂಚನೆಯನ್ನು ಕಳಿಸಿದ್ದೇನೆ.

ಅಧ್ಯಕ್ಷರು.—ಅದು ನನಗೆ ಬಂದಿದೆ.

ಶ್ರೀ ಎಚ್. ಟಿ. ಕೃಷ್ಣಪ್ಪ.—ಅಲ್ಲಿ ಜನರಿಗೆ ಕೆಲಸವನ್ನು ಕೊಡಬೇಕು. ಕುಡಿಯುವ ನೀರನ್ನು ಕೊಡಬೇಕು, ಅವರಿಗೆ ಆಹಾರಧಾನ್ಯಗಳನ್ನು ಸರಿಯಾದ ರೀತಿಯಲ್ಲಿ ವಿತರಣೆ ಮಾಡಬೇಕು. ಅವರಿಂದ ಸಾಲ ವಸೂಲು ಮಾಡತಕ್ಕಂಥಾದ್ದನ್ನು ತಕ್ಷಣ ನಿಲ್ಲಿಸಬೇಕು. ನಿಮ್ಮ ಕಡೆ ಅಲ್ಲೆಲ್ಲಾ ೬ ಆಣೆಗಿಂತ ಕಡಿಮೆ ಬೆಳೆ ಆಗಿದೆ. ಪರಿಸ್ಥಿತಿ ಹೀಗಿರುವುದರಿಂದ ಅಲ್ಲಿ ರೈತರಿಂದ ಸಾಲ ವಸೂಲು ಮಾಡುವುದನ್ನು ಈ ತಕ್ಷಣದಲ್ಲಿ ನಿಲ್ಲಿಸಬೇಕು. ಅಧಿಕಾರಿಗಳು ಆ ಜನರಿಗೆ ಅನುಕೂಲಗಳನ್ನು ಮಾಡಿ ಕೊಡುವುದರಲ್ಲಿ ವಿಳಂಬ ಮಾಡಿ ಬಡ ಜನರನ್ನು ಹಿಂಸೆಗೆ ಗುರಿ ಮಾಡಿದ್ದಾರೆ, ಆದ್ದರಿಂದ ಸರ್ಕಾರದವರು ಈ ವಿಚಾರದಲ್ಲಿ ವಿಶೇಷವಾದ ಗಮನವನ್ನು ಕೊಟ್ಟು ತತ್‌ಕ್ಷಣದಲ್ಲಿ ಅಧಿಕಾರಿಗಳಿಗೆ ಏನು ಸೂಚನೆಯನ್ನು ಕೊಡಬೇಕೋ ಅದನ್ನು ಕೊಟ್ಟು, ಆ ಬಡಜನರನ್ನು ರಕ್ಷಣೆ ಮಾಡಬೇಕು.

ಅಧ್ಯಕ್ಷರು.—ನಿಮ್ಮ ಕಾಲಿಂಗ್ ಅಟೆನ್‌ಷನ್ ನೋಟೀಸ್ ಬಂದಿದೆ. ಈಗಲೇ ಮಾನ್ಯ ಮಂತ್ರಿಯವರು ಇದಕ್ಕೆ ಉತ್ತರ ಹೇಳಬೇಕಾದರೆ, ಸಾಧ್ಯವಿಲ್ಲ.

ಶ್ರೀ ಎಚ್. ಟಿ ಕೃಷ್ಣಪ್ಪ.—ನಮ್ಮ ಜಿಲ್ಲೆಯಲ್ಲಿ ಎಲ್ಲೆಲ್ಲಿ ೬ ಆಣೆಗಿಂತ ಕಡಿಮೆ ಬೆಳೆ ಆಗಿದೆಯೋ ಅಲ್ಲಿ ರೈತರಿಂದ ಸಾಲವನ್ನು ವಸೂಲು ಮಾಡುವಾರದು ಎಂದು ಈ ಕೂಡಲೇ ಮಾನ್ಯ ಮಂತ್ರಿಯವರು ಆದೇಶ ಕೊಡಬೇಕು. ಈ ಬಗ್ಗೆ ಒಂದು ಆದೇಶವನ್ನು ಕೊಡುತ್ತಾರೆಯೇ ಅಥವಾ ಇಲ್ಲವೇ ಎಂಬುದನ್ನು ಮಾನ್ಯ ಮಂತ್ರಿಯವರು ಹೇಳಬೇಕು.

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಮಾನ್ಯ ರೆವಿನ್ಯೂ ಮಂತ್ರಿಯವರು ಅದು ಬರಗಾಲಕ್ಕೆ ತುತ್ತಾಗಿರುವ ಪ್ರದೇಶ ಎಂದು ಘೋಷಣೆ ಮಾಡಿ ಒಂದು ಗೆಜೆಟ್ ನೋಟಿಫಿಕೇಷನ್ ಮಾಡಿದ್ದಾರೆ. ಇನ್ನು ಏತಕ್ಕೆ ಈ ಬಗ್ಗೆ ನೀವು ಯೋಚನೆ ಮಾಡುತ್ತೀರಿ?

ಅಧ್ಯಕ್ಷರು.—ಅಲ್ಲಿ ನೌಕರರು ೧೦-೨೦ ಸೇರು ದವಸ ಧಾನ್ಯಗಳನ್ನು ತಂದು ಹಾಕಿ ಎಂದು ತಮ್ಮಟೆ ಹೊಡೆದುಕೊಂಡು ಕುಣಿಯತಕ್ಕಂಥ ಪ್ರವೃತ್ತಿಯನ್ನು ಮಾಡುತ್ತಿದ್ದಾರೆ ಎಂದು ಮಾನ್ಯ ಸದಸ್ಯರು ಹೇಳುತ್ತಿದ್ದಾರೆ.

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಅದನ್ನು ನಿಲ್ಲಿಸುವುದಕ್ಕೆ ನಾನು ಆದೇಶ ಕೊಡುತ್ತೇನೆ.

ಶ್ರೀ ಶೇರ್‌ಖಾನ್.—ಸ್ವಾಮಿ, ನಮ್ಮ ಏರಿಯಾದಲ್ಲಿ ಜನರಿಗೆ ಕುಡಿಯುವುದಕ್ಕೆ ನೀರು ಇಲ್ಲ ಮತ್ತು ನನ್ನ ಮತದಾರರ ಕ್ಷೇತ್ರದಲ್ಲಿಯೂ ಕೂಡ ನೀರು ಇಲ್ಲ. ಈ ಬಗ್ಗೆ ನಾವು ಕಾಲಿಂಗ್ ಅಟೆನ್‌ಷನ್ ನೋಟಿಸ್ ಕಳಿಸಿದ್ದೇವೆ, ಅದನ್ನು ಕಳಿಸಿ ೧೬ ದಿವಸವಾಯಿತು. ಇನ್ನೂ ಕುಡಿಯುವುದಕ್ಕೆ ನೀರು ಸಿಕ್ಕುತ್ತಾ ಇಲ್ಲ.

ಅಧ್ಯಕ್ಷರು.—ಈಗಾಗಲೇ ನಾನು ಹೇಳಿದ್ದೇನೆ. ತಮ್ಮದು ಒಬ್ಬರದೇ ಅಲ್ಲ. ೨೫ ಜನ ಮಾನ್ಯ ಸದಸ್ಯರು ಈ ಕುಡಿಯುವ ನೀರಿನ ವಿಚಾರದಲ್ಲಿ ಕಾಲಿಂಗ್ ಅಟೆನ್‌ಷನ್ ನೋಟೀಸ್ ಕೊಟ್ಟಿದ್ದಾರೆ. ಈ ಬಗ್ಗೆ ಸರ್ಕಾರದ ನಿಲುವು ಏನು ಎಂಬುದು ಮಾನ್ಯ ಸದಸ್ಯರೆಲ್ಲರಿಗೆ ಗೊತ್ತಾಗುವುದಕ್ಕೆ ನಾನು ವ್ಯವಸ್ಥೆ ಮಾಡಿಕೊಡುತ್ತೇನೆ ಎಂದು ಈಗಾಗಲೇ ಹೇಳಿದ್ದೇನೆ.

ಶ್ರೀ ಶೇರ್‌ಖಾನ್.—ಅದನ್ನು ನಾನು ಒಪ್ಪಿದ್ದೇನೆ. ಆದರೆ ಈಗ ಅಲ್ಲಿ ನೀರು ಹೇಗೆ ಸಿಕ್ಕಬೇಕು?

ಅಧ್ಯಕ್ಷರು.—ತಾವು ಕೇಳಿದ ತಕ್ಷಣ ನೀರು ಬರುವುದಿಲ್ಲ. ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಕೆ. ಹೆಚ್. ಹನುಮೇಗೌಡ.—ಸ್ವಾಮಿ, ಮಾನ್ಯ ಕೃಷ್ಣಪ್ಪನವರು ಹೇಳಿದಹಾಗೆ ಮಂಡ್ಯ ಜಿಲ್ಲೆ ಒಂದರಲ್ಲೇ ಬರಗಾಲ ಪ್ರದೇಶಗಳು ಇಲ್ಲ. ರಾಜ್ಯದ ಬಹು ಭಾಗದಲ್ಲಿ ಬರಗಾಲ ಪ್ರದೇಶ ಇದೆ. ನಮ್ಮ ಹಾಸನ ಜಿಲ್ಲೆಯಲ್ಲಿ ಅರ್ಧ ಭಾಗ ಬರಗಾಲ ಪ್ರದೇಶ ಇದೆ; ಚಿತ್ರದುರ್ಗ ಮತ್ತು ಕೋಲಾರ ಜಿಲ್ಲೆಗಳಲ್ಲೂ ಇದೆ. ಹೀಗೆ ರಾಜ್ಯದ ಅನೇಕ ಜಿಲ್ಲೆಗಳಲ್ಲಿ ಇದೆ. ಅಲ್ಲೆಲ್ಲಾ ಸಹಕಾರ ಇಲಾಖೆಯ ಅಧಿಕಾರಿಗಳು ಅಲ್ಪಾವಧಿ ಮತ್ತು ಮಧ್ಯಮಾವಧಿ ಸಾಲಗಳನ್ನು ರೈತರಿಂದ ದೌರ್ಜನ್ಯದಿಂದ ವಸೂಲು ಮಾಡುತ್ತಿದ್ದಾರೆ ಮಾನ್ಯ ಸಚಿವರು ಹೋಗಿಬಿಟ್ಟರಲ್ಲಾ?

ಅಧ್ಯಕ್ಷರು.—ಇಲ್ಲೇ ಇದ್ದಾರೆ, ಮುಂದಕ್ಕೆ ಹೇಳಿ.

ಶ್ರೀ ಕೆ. ಎಚ್. ಹನುಮೇಗೌಡ.—ಮಾನ್ಯ ಅಧ್ಯಕ್ಷರೇ ಸರ್ಕಾರದ ಅಧಿಕಾರಿಗಳು ದೌರ್ಜನ್ಯದಿಂದ ಸಾಲವನ್ನು ವಸೂಲು ಮಾಡುತ್ತಿದ್ದಾರೆ. ಮಾನ್ಯ ಮಂತ್ರಿಗಳು ಮಂಡ್ಯ ಜಿಲ್ಲೆಗೆ ಸಂಬಂಧ ಪಟ್ಟಂಥ ಸಹಕಾರಿ ಸಂಘಗಳ ಸಾಲವನ್ನು ನಿಲ್ಲಿಸಿದ್ದೇವೆ ಎಂದು ಹೇಳಿದರು. ಆದ್ದರಿಂದ ಎಲ್ಲಾ ಜಿಲ್ಲೆಗಳಲ್ಲಿಯೂ ಸಾಲವನ್ನು ವಸೂಲು ಮಾಡುವುದನ್ನು ತಕ್ಷಣ ನಿಲ್ಲಿಸಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ.

ಶ್ರೀ ವೀರಣ್ಣ ಪಿ. ಮುದಗಲ್.—ಮಾನ್ಯ ಅಧ್ಯಕ್ಷರೇ ಈ ಸಮಸ್ಯೆ ಇಡೀ ಕರ್ನಾಟಕ ರಾಜ್ಯಕ್ಕೆ ಸಂಬಂಧಪಟ್ಟ ಸಮಸ್ಯೆಯಾಗಿದೆ. ರಾಜ್ಯದ ಎಲ್ಲಾ ಕಡೆಗಳಲ್ಲಿಯೂ ಭೀಕರವಾದ ಬರಗಾಲ ಪರಿಸ್ಥಿತಿಗೆ ಜನರು ತುತ್ತಾಗಿದ್ದಾರೆ. ರೈತರಿಗೆ ಕೊಟ್ಟಂತಹ ಸಾಲವನ್ನು ಮರುಪಾವತಿ ಮಾಡುವುದಕ್ಕೆ ಜನರಿಗೆ ತಿನ್ನುವುದಕ್ಕೆ ಕಾಳು ಇಲ್ಲ, ದನಗಳಿಗೆ ಮೇವು ಮತ್ತು ಕುಡಿಯುವುದಕ್ಕೆ ನೀರು ಇಲ್ಲ ಇಂಥ ಪರಿಸ್ಥಿತಿಯಲ್ಲಿ ಸಹಕಾರ ಸಂಘಗಳ ಸಾಲವನ್ನು ವಸೂಲು ಮಾಡುವುದು ದುರದೃಷ್ಟಕರ. ಆದ್ದರಿಂದ ಸರ್ಕಾರದವರು ಎಲ್ಲೆಲ್ಲಿ ಬರಗಾಲ ಎಂದು ಡಿಕ್ಲೇರ್ ಮಾಡಿದ್ದಾರೆಯೋ ಆ ಎಲ್ಲಾ ಸಹಕಾರ ಸಂಘಗಳು ಸಾಲಗಳನ್ನು ವಸೂಲು ಮಾಡುವುದನ್ನು ನಿಲ್ಲಿಸಲು ಕ್ರಮವನ್ನು ತೆಗೆದುಕೊಳ್ಳಬೇಕು, ಮತ್ತು ಸಣ್ಣ ಪುಟ್ಟ ರೈತರಿಗೂ ಕೂಡ ಸಾಲವನ್ನು ವಸೂಲು ಮಾಡುವುದನ್ನು ನಿಲ್ಲಿಸಬೇಕು.

ಶ್ರೀ ಬಸವರಾಜ ಎಚ್. ಪಾಟೀಲ್.—ಈಗಾಗಲೇ ಹಣ ಮಂಜೂರಾಗಿ ರಾಯಚೂರು ಜಿಲ್ಲೆಯಲ್ಲಿ ಕಾಮಗಾರಿ ಕೆಲಸಗಳನ್ನು ಕೈಗೊಂಡಿದ್ದಾರೆ. ರಾಯಚೂರು ಜಿಲ್ಲೆಯಲ್ಲಿ ಇಂಥ ಒಂದು ತೀವ್ರವಾದ ಬರಗಾಲ ಪರಿಸ್ಥಿತಿ ಇದ್ದರೂ ಕೂಡ ಸಹಕಾರ ಸಂಘಗಳ ಸಾಲವನ್ನು ವಸೂಲು ಮಾಡುತ್ತಿದ್ದಾರೆ. ಆದ್ದರಿಂದ ಈಗ ಸಹಕಾರ ಸಂಘಗಳ ಸಾಲವನ್ನು ವಸೂಲು ಮಾಡುವ ಸಂಬಂಧ ಪಟ್ಟ ಅಧಿಕಾರಿಗಳಿಗೆ ಸೂಕ್ತ ಸಲಹೆಯನ್ನು ಕೊಡಬೇಕೆಂದು ನಾನು ಹೇಳುತ್ತೇನೆ.

ಶ್ರೀ ವಿ. ಬಿ. ಭಾವಿ—ಮಾನ್ಯ ಅಧ್ಯಕ್ಷರೇ ಬಳ್ಳಾರಿ ಜಿಲ್ಲೆಯಲ್ಲಿಯೂ ಕೂಡ ಸಾಲವನ್ನು ವಸೂಲು ಮಾಡುತ್ತಿದ್ದಾರೆ. ನಮ್ಮ ಧಾರವಾಡ ಜಿಲ್ಲೆಯಲ್ಲಿ ಬಹಳ ಭೀಕರವಾದ ಬರಗಾಲ ಪರಿಸ್ಥಿತಿ ಇದೆ ಆದ್ದರಿಂದ ಅಲ್ಲಿನ ರೈತರಿಗೆ ಬಹಳ ತೊಂದರೆಯಾಗಿದೆ. ಆದರೂ ಸಹಾ ಸಹಕಾರಿ ಸಂಘಗಳು ಸಾಲವನ್ನು ವಸೂಲು ಮಾಡುತ್ತಿದ್ದಾರೆ.

ಶ್ರೀ ವಿ. ಮಸಿಯಪ್ಪ.—ಸ್ವಾಮಿ ನೆನ್ನೆ ತಾನೆ ಮಾನ್ಯ ಸಹಕಾರ ಸಚಿವರು ಚಿತ್ರದುರ್ಗ ಜಿಲ್ಲೆಗೆ ಬಂದಿದ್ದಾಗ ಅಲ್ಲಿನ ಭರಗಾಲ ಪರಿಸ್ಥಿತಿಯನ್ನು ಅವರ ಗಮನಕ್ಕೆ ತಂದಿದ್ದೇನೆ. ಹಿರಿಯೂರು ಚಳ್ಳಕೆರೆ, ಮೊಳಕಾಲ್ಮೂರು ಇತ್ಯಾದಿ ಅರ್ಧಭಾಗದಷ್ಟು ಮತ್ತು ಜಗಳೂರು ಹೊಳಲ್ಕೆರೆ ಈ ಭಾಗಗಳಲ್ಲಿಯೂ ಅಭಾವದ ಪರಿಸ್ಥಿತಿ ಇದೆ. ಅಲ್ಲಿಯೂ ಸಹಾ ಸಾಲವನ್ನು ವಸೂಲು ಮಾಡುತ್ತಿದ್ದಾರೆ. ಅಲ್ಲಿನ ರೈತರಿಗೆ ಬಹಳ ತೊಂದರೆಯಾಗಿದೆ. ಸಾಲವನ್ನು ವಸೂಲು ಮಾಡುವ ಸಂದರ್ಭದಲ್ಲಿ ಪಕ್ಷಪಾತ ನಡೆದಿದೆ. ಈ ಜಿಲ್ಲೆಯ ಸಹಕಾರಿ ಬ್ಯಾಂಕನವರು ಅವರಿಗೆ ಬೇಕಾದವರಿಗೆ ರಕ್ಷಣೆ ಕೊಡುವುದು ಮತ್ತು ಬೇಡವಾದವರಿಗೆ ಕಿರುಕುಳ ಕೊಟ್ಟು ಅವರ ಮನೆಗಳನ್ನು ಜಪ್ತಿ ಮಾಡುತ್ತಾರೆ. ಅಂಥಹ ಅಧಿಕಾರಿಗಳ ಮೇಲೆ ತೀವ್ರ ಕ್ರಮ ತೆಗೆದುಕೊಳ್ಳಬೇಕು. ಸಾಲವನ್ನು ವಸೂಲು ಮಾಡಿದಾಗ ಏನು ಸಾಮಾನುಗಳನ್ನು ವಶಪಡಿಸಿಕೊಳ್ಳುತ್ತಾರೆ ಆ ಸಾಮಾನುಗಳಿಗೆ ಎನು ದಾಖಲೆ ಬರೆದುಕೊಡುವುದಿಲ್ಲ. ಆದ್ದರಿಂದ ರೈತರಿಗೆ ಅನೇಕ ಅನಾನುಕೂಲಗಳು ಆಗುತ್ತವೆ. ಈ ವಿಷಯವನ್ನು ಮಾನ್ಯ ಸಚಿವರಿಗೆ ತಿಳಿಸಿದ್ದೇನೆ. ಅವರು ಇದರ ಬಗ್ಗೆ ಎನು ಇನ್‌ಸ್ಟ್ರಕ್ಷನ್ ಕೊಟ್ಟಿದ್ದಾರೇಯೋ ಗೊತ್ತಿಲ್ಲ. ಪರಿಸ್ಥಿತಿ ಏನೂ ಬದಲಾವಣೆ ಆಗಿಲ್ಲ. ಅಭಾವದ ಜೊತೆಗೆ ಅಧಿಕಾರಿಗಳಿಂದ ರಕ್ಷಣೆ ಇಲ್ಲ. ಸಣ್ಣ ಮಧ್ಯಮ ಮತ್ತು ದೊಡ್ಡ ರೈತರು ಎನ್ನುತಕ್ಕ ವ್ಯತ್ಯಾಸ ಮಾಡದೆ ಸಹಾನುಭೂತಿಯನ್ನು ತೋರಿಸಬೇಕು. ಹತ್ತಿ ಬೆಳೆ ಬಂದಾಗ ಸಾಲವನ್ನು ಕೊಡುವುದಕ್ಕೆ ತಯಾರಾಗಿದ್ದಾರೆ. ಅಲ್ಲಿಯವರಿವಿಗೂ ಕಾಲಾವಕಾಶವನ್ನು ಕೊಡಬೇಕು ಎಂದು ನಾನು ಈ ಸಂಧರ್ಬದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಶಿವನಂಜಪ್ಪ.—ಸ್ವಾಮಿ ತುಮಕೂರು ಜಿಲ್ಲೆಯಲ್ಲಿ ಬೆಳ್ಳಾವಿ ಮತ್ತು ಕೋರ ತಾಲ್ಲೂಕುಗಳು ಅಭಾವ ಪರಿಸ್ಥಿತಿಗೆ ಒಳಗಾಗಿವೆ. ಎಂದು ಸರ್ಕಾರ ಡಿಕ್ಲೇರ್ ಮಾಡಿದರೂ ಕೂಡ ಅಲ್ಲಿನ ಅಧಿಕಾರಿಗಳು ಸಾಲದ ವಸೂಲಿ ಬಗ್ಗೆ ಅವಮಾನಕರವಾದ ರೀತಿಯಲ್ಲಿ ವರ್ತಿಸುತ್ತಿದ್ದಾರೆ. ಈ ವಿಷಯವನ್ನು ಮಾನ್ಯ ಮಂತ್ರಿಗಳಿಗೂ ಸಹ ಹೇಳಿದ್ದೇನೆ. ಈ ಒಂದು ಬರಗಾಲ ಪರಿಸ್ಥಿತಿಯಲ್ಲಿ ೩-೪ ತಿಂಗಳುಗಳಿಂದ ದನಗಳಿಗೆ ಹುಲ್ಲು ಜನಗಳಿಗೆ ಆಹಾರ ಪದಾರ್ಥಗಳನ್ನು ಒದಗಿಸುವಂತೆ ಮಾನ್ಯ ಕಂದಾಯ ಮಂತ್ರಿಗಳನ್ನು ಕೇಳಿದ್ದೇವು. ಆದರೆ ಇದುವರೆವಿಗೂ ಯಾವ ಕ್ರಮವನ್ನು ಕೈಗೊಂಡಿಲ್ಲ. ಅದನ್ನು ಒದಗಿಸುವು

ದಕ್ಕೆ ಗಮನ ಕೊಡಬೇಕು. ಅಲ್ಲಿನ ರೈತರಿಗೆ ಬಹಳ ತೊಂದರೆಯಾಗಿದೆ. ಮಾನ್ಯ ಸಹಕಾರ ಮಂತ್ರಿಗಳು ಮತ್ತು ಕಂದಾಯ ಮಂತ್ರಿಗಳು ಇಬ್ಬರೂ ಸೂಕ್ತ ಪರಿಹಾರವನ್ನು ಕೊಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಮಾನ್ಯ ಅಧ್ಯಕ್ಷರೇ ಕಳೆದ ವರ್ಷ ರೈತರು ಸಾಲವನ್ನು ತೆಗೆದುಕೊಂಡಿದ್ದರು. ಈ ವರ್ಷ ಬರಗಾಲ ಪರಿಸ್ಥಿತಿ ಇದೆ ಎಂದು ಡಿಕ್ಲೇರ್ ಮಾಡಿದ್ದಾರೆ. ಆ ಸಾಲವನ್ನು ಮುಂದಕ್ಕೆ ಹಾಕಬೇಕಾದದು ಸಹಜ ಎಂದು ನಾವು ಜಿಲ್ಲಾಧಿಕಾರಿಗಳಿಗೂ ಸಹ ಆದೇಶವನ್ನು ಕೊಟ್ಟಿದ್ದೇವೆ ಆದರೆ ರೈತರು ಎರಡು ಮೂರು ವರ್ಷಗಳಿಂದ ಕೊಡಬೇಕಾದ ಬಾಕಿಯನ್ನು ಕೊಟ್ಟಿಲ್ಲ ಆಗಲೂ ಸಹಾ ಬರಗಾಲ ಪರಿಸ್ಥಿತಿ ಇತ್ತೋ?

ಶ್ರೀ ಎಚ್. ಟಿ. ಕೃಷ್ಣಪ್ಪ.—ಸ್ವಾಮಿ ಮೂರು ವರ್ಷಗಳಿಂದಲೂ ಬರಗಾಲದ ಪರಿಸ್ಥಿತಿ ಇದ್ದೇ ಇದೆ.

ಶ್ರೀ ಎಚ್.ಸಿ.ಶ್ರೀಕಂಠಯ್ಯ.—ಈ ವರ್ಷ ಬರಗಾಲ ಪರಿಸ್ಥಿತಿ ಬಂದಿದೆ ಎಂದು ಸಾಲದ ವಸೂಲಾತಿಯನ್ನು ಮುಂದಕ್ಕೆ ಹಾಕಿ ಎಂದು ಹೇಳಿದ್ದೀರಿ. ಆದರೆ ಹೋದ ವರ್ಷ ಒಳ್ಳೆಯ ಸುಭಿಕ್ಷವಾಗಿದ್ದಾಗ ರೈತರು ಎತಕ್ಕೆ ಸಾಲವನ್ನು ವಾಪಸ್ಸು ಕೊಡಲಿಲ್ಲ?

ಶ್ರೀ ಎಚ್.ಟಿ. ಕೃಷ್ಣಪ್ಪ.—ಸ್ವಾಮಿ ಒಳ್ಳೆಯ ಸುಭಿಕ್ಷವಾಗಿದ್ದ ಕಾಲದಲ್ಲಿ ಸಹಕಾರಿ ಸಂಘಗಳ ಸಾಲವನ್ನು ವಾಪಸ್ಸು ಕೊಡುವುದಕ್ಕೆ ಅಶಕ್ತರಾಗಿದ್ದ ರೈತರು ಬರಗಾಲ ಪರಿಸ್ಥಿತಿಯಲ್ಲಿ ಕೊಡುವುದಕ್ಕೆ ಎಲ್ಲಿಂದ ಸಾಧ್ಯವಾಗುತ್ತದೆ.?

ಅಧ್ಯಕ್ಷರು.—ಸಧ್ಯದ ಪರಿಸ್ಥಿತಿಗೆ ಪರಿಹಾರ ಬೇಕು. ವಾದಕ್ಕೆ ಇಳಿದರೆ ಪರಿಹಾರ ದೊರೆಯುವುದಿಲ್ಲ.

ಶ್ರೀ ಕೆ.ಎಚ್. ಶ್ರೀನಿವಾಸ್.—ಇದೇರೀತಿ ವಾದವನ್ನು ಮುಂದುವರಿಸಿಕೊಂಡು ಹೋದರೆ ಕಷ್ಟವಾಗುತ್ತದೆ. ಈ ಒಂದು ಬರಗಾಲದ ವರ್ಷದಲ್ಲಿ ಹಿಂದಿನ ವರ್ಷದ ಬಾಕಿಯನ್ನು ಕೊಡಬೇಕೆಂದು ಸರ್ಕಾರ ನಿರೀಕ್ಷೆ ಮಾಡುವುದು ಅಸಂಬದ್ಧವಾದ ಮಾತು, ಅಲ್ಲವೆ?

ಅಧ್ಯಕ್ಷರು.—ಆಗ ಸುಭಿಕ್ಷವಾಗಿತ್ತು. ಅದಕ್ಕಾಗಿ ದುಡ್ಡು ಕೊಡಲಿಲ್ಲ.

ಶ್ರೀ ಎಚ್.ಸಿ. ಶ್ರೀಕಂಠಯ್ಯ.—ಅಧ್ಯಕ್ಷರೇ ಮಾನ್ಯ ಸದಸ್ಯರೇ ಆ ಹಣವನ್ನು ವಸೂಲು ಮಾಡಿಕೊಟ್ಟಿದ್ದರೆ ರೈತರನ್ನು ನಾವು ಎತಕ್ಕೆ ಸಾಲವನ್ನು ಕೇಳುತ್ತಿದ್ದೆವು.

ಶ್ರೀ ಎ. ಲಕ್ಷ್ಮೀಸಾಗರ್.—ಸ್ವಾಮಿ ನಾನು ಒಂದು ಪ್ರಶ್ನೆಯನ್ನು ಕೇಳಬೇಕಾಗಿದೆ.

ಅಧ್ಯಕ್ಷರು.—ನಿಮ್ಮದು ಸಕ್ಕರೆ ಮತ್ತು ಸೀಮೆಎಣ್ಣೆ ಕೊಡುತಕ್ಕಂತಹ ಸೊಸೈಟಿಗಳು ಆದ್ದರಿಂದ ನೀವು ದಯವಿಟ್ಟು ಸುಮ್ಮನೆ ಕುಳಿತುಕೊಳ್ಳಿ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈಗಾಗಲೇ ಸಾಲವನ್ನು ವಸೂಲು ಮಾಡುವ ಬಗ್ಗೆ ಸರ್ಕಾರ ಒಂದು ನಿರ್ಧಾರವನ್ನು ತೆಗೆದುಕೊಂಡಿದೆ. ಮಾನ್ಯ ಮುಖ್ಯ ಮಂತ್ರಿಗಳು ರೈತರು ಮತ್ತು ವಿರೋಧ ಪಕ್ಷದ ನಾಯಕರುಗಳ ಜೊತೆಯಲ್ಲಿ ಚರ್ಚೆ ಮಾಡಿದ್ದಾರೆ. ಎಂದು ನನ್ನ ತಿಳುವಳಿಕೆಗೆ ಬಂದಿದೆ. ತಾವು ರಿಜರ್ವ್ ಬ್ಯಾಂಕ್ ರಿಸ್ಟ್ರಿಕ್ಷನ್‌ಗೆ ಒಳಪಟ್ಟು ರೈತರಿಗೆ ಸಹಾಯ ಮಾಡುವುದಾದರೆ ಮಾಡಿ ನಾನು ಒಂದು ಸಲಹೆಯನ್ನು ಕೊಟ್ಟಿದ್ದೇನೆ. ಅದು ಏನೆಂದರೆ ಆಂಧ್ರಪ್ರದೇಶದ ಸರ್ಕಾರ ಸಾಲವನ್ನು ಆರು ಕಂತುಗಳಲ್ಲಿ ವಸೂಲು ಮಾಡುವ ಹಾಗೆ ಸಾಲವನ್ನು ಕನ್‌ವರ್‌ಷನ್ ಮಾಡಿದ್ದಾರೆ. ಮೊದಲನೇ ಕಂತು ಕಟ್ಟಿದವರಿಗೆ ಡಿಫಾಲ್ಟರ್ಸ್ ಆಂಥ ಟ್ರೀಟ್ ಮಾಡದೆ ಪುನ; ಅವರಿಗೆ ಹೊಸದಾಗಿ ಸಾಲವನ್ನು ಕೊಡುವ ವ್ಯವಸ್ಥೆಯನ್ನು ಮಾಡಿದ್ದಾರೆ. ಈಗ ರೈತರು ಎರಡು ಮೂರು ವರ್ಷಗಳಿಂದ ಬರಗಾಲ ಪರಿಸ್ಥಿತಿಗೆ ಸಿಕ್ಕಿಹಾಕಿಕೊಂಡಿದ್ದಾರೆ. ಮತ್ತೆ ಎರಡು ವರ್ಷಗಳಿಂದ ಆಹಾರ ಪದಾರ್ಥಗಳ ಬೆಲೆ ಬಿದ್ದಿದೆ. ಆದ್ದರಿಂದ ರೈತರು ತುಂಬ ಕಷ್ಟದಲ್ಲಿ ಇದ್ದಾರೆ. ಆದ್ದರಿಂದ ರೈತರು ಸಾಲವನ್ನು ಮರುಪಾವತಿ ಮಾಡುವುದಕ್ಕೆ ತೊಂದರೆಯಾಗುತ್ತದೆ. ಆದ್ದರಿಂದ ಮಾನ್ಯ ಸಹಕಾರ ಮಂತ್ರಿಗಳು ಆರ್ಥಿಕ ಮಂತ್ರಿಗಳು, ಕಂದಾಯ ಮಂತ್ರಿಗಳು ಹೌಸಿಂಗ್ ಬೋರ್ಡ್ ಮಂತ್ರಿಗಳು ಹಾಗೂ ಮಾನ್ಯ ಕಾರ್ಯದರ್ಶಿಗಳು ರೆವಿನ್ಯೂ ಕಾರ್ಯದರ್ಶಿಗಳು ನಮ್ಮ ಸಹಕಾರ ಇಲಾಖೆಯ ಕಾರ್ಯದರ್ಶಿಗಳು ಎಲ್ಲರೂ ಕೂಡಲೆ ಇದರ ಬಗ್ಗೆ ಒಂದು ನಿರ್ಣಯವನ್ನು ತೆಗೆದುಕೊಂಡು ಚರ್ಚೆ ಮಾಡಬೇಕಾಗಿದೆ

ಈಗ ಬರಗಾಲ ಪರಿಸ್ಥಿತಿ ಇರುವುದರಿಂದ ರೈತರು ಸಾಲವನ್ನು ಮರುಪಾವತಿ ಮಾಡುವುದಕ್ಕೆ ಇಲ್ಲ. ಅವರಿಗೆ ಅನುಕೂಲವಾಗಬೇಕು ಸರ್ಕಾರದವರಿಗೆ ಹಣ ಬೇಕು. ರಿಜರ್ವ್ ಬ್ಯಾಂಕ್ ರಿಸ್ಟ್ರಿಕ್ಷನ್ ಏನಿದೆ ಅದೇ ರೀತಿಯಾಗಿ ಮಾಡಬೇಕು. ಆದ್ದರಿಂದ ಆಂಧ್ರಪ್ರದೇಶದ ಸರ್ಕಾರದವರಲ್ಲಿ ಇದರ ಬಗ್ಗೆ ಇರತಕ್ಕಂತಹ ವಿವರಗಳನ್ನು ತರಿಸಿಕೊಂಡು ಅಧ್ಯಯನ ಮಾಡಿ ಆ ಕ್ರಮವನ್ನು ತಾವು ಸಹಾ ಜಾರಿಗೆ ಕೊಡುತ್ತೀರೆಂದು ನನಗೆ ಭರವಸೆಯನ್ನು ಕೊಡುತ್ತೀರಾ?

ಶ್ರೀ ಎಚ್. ಸಿ. ಶ್ರೀಕಂಠಯ್ಯ.—ಈ ಬಗ್ಗೆ ಈಗಾಗಲೇ ನಮ್ಮ ಅಧಿಕಾರಿಗಳು ಆಂಧ್ರಕ್ಕೆ ಹೋಗಿ ಡೀಟೈಲ್ ಸ್ಟಡಿ ಮಾಡಿಕೊಂಡು ಬಂದಿದ್ದಾರೆ. ಈ ಕನ್‌ವರ್ಷನ್ ವಿಚಾರದಲ್ಲಿ ಮಾನ್ಯ ಬೊಮ್ಮಾಯಿ ಅವರು ಹೇಳಿದ್ದು ಸಹಜವಾಗಿದೆ. ಅದನ್ನು ನಾನು ತಪ್ಪು ಎಂದು ಹೇಳುವುದಿಲ್ಲ. ಆದರೆ ಇದಕ್ಕೆ ನಾವು ಪ್ರೋತ್ಸಾಹ ಕೊಡುತ್ತಾ ಹೋದರೆ ಮುಂದೆ ಬಹಳ ಕಷ್ಟವಾಗುತ್ತದೆ. ಈಗ ಜಿಲ್ಲಾ ಬ್ಯಾಂಕ್‌ಗಳಲ್ಲಿ ಈ ಒಂದು ಕನ್‌ವರ್ಷನ್ ಮಾಡುತ್ತಿದ್ದಾರೆ. ದಕ್ಷಿಣಕನ್ನಡ ಜಿಲ್ಲೆಯಲ್ಲಿ ಒಂದರಿಂದ ೩ ಕೋಟಿ ರೂಪಾಯಿಗಳವರೆಗೆ ದುರುಪಯೋಗವಾಗಿದೆ. ಈ ಮೊದಲು ಈ ಜಿಲ್ಲಾ ಸಹಕಾರಿ ಬ್ಯಾಂಕ್ ಬಹಳ ಚೆನ್ನಾಗಿ ಕೆಲಸ ಮಾಡುತ್ತಿತ್ತು. ಆದರೆ ಇತ್ತೀಚೆಗೆ ಅಲ್ಲಿ ಕೋಟ್ಯಾಂತರ ರೂಪಾಯಿಗಳಷ್ಟು ಹಣದ ದುರುಪಯೋಗವಾಗಿದೆ. ೧೯೭೩ನೇ ಇಸವಿಯಿಂದಲೂ ಸಹ ಅಲ್ಲಿ ಸಾಲ ಮಂಜೂರಾತಿ ಮಾಡುತ್ತಿರುವುದು ಒಂದೇ ಹೆಸರಿನವರಿಗೆ ಮತ್ತು ಅದೇ ಮೆಂಬರ್‌ಗಳಿಗೆ, ಇದರ ಜೊತೆಗೆ ಸಾಲವನ್ನು ಕನ್‌ವರ್ಷನ್ ಮಾಡುತ್ತಿರುವುದು ಸಹ ನಡೆಯುತ್ತಿದೆ. ಈ ರೀತಿ ಕನ್‌ವರ್ಷನ್‌ಗೆ ಪ್ರೋತ್ಸಾಹ ಕೊಡುತ್ತಾ ಹೋದರೆ ಬಹಳ ಕಷ್ಟವಾಗುತ್ತದೆ. ಮುಂದೆ ಬಡವರಿಗೆ ಸಾಲ ಕೊಡುವುದಕ್ಕೆ ಸಾಧ್ಯವಾಗುವುದಿಲ್ಲ. ಆದರೂ ಸಹ ಮಾನ್ಯ ಸದಸ್ಯರ ಅಭಿಪ್ರಾಯದಂತೆ ಈಗಿನ ಒಂದು ಸಂದರ್ಭಕ್ಕೆತಕ್ಕಂಥ ರೀತಿಯಲ್ಲಿ ಪರಿಶೀಲನೆ ಮಾಡಿಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈಗ ಎಲ್ಲೆಲ್ಲಿ ಬರಗಾಲ ಇದೆಯೋ, ಅಲ್ಲೆಲ್ಲಾ ಸಾಲದ ವಸೂಲಾತಿಯನ್ನು ಮುಂದಕ್ಕೆ ಹಾಕುತ್ತೇವೆಂದು ಸರ್ಕಾರದವರು ನಮಗೆ ಸ್ಟೇಸಿಪಿಕ್ ಆಗಿ ಹೇಳಿದ್ದರು. ಆದರೂ ಸಹ ಈಗ ಅನೇಕ ಕಡೆಗಳಲ್ಲಿ ವಸೂಲಿ ಮಾಡುತ್ತಿದ್ದಾರೆ. ಎಲ್ಲಿಯೂ ವಸೂಲಿ ಮಾಡಬಾರದೆಂದು ನಾನು ಹೇಳುವುದಿಲ್ಲ, ಆದರೆ ಬರಗಾಲ ಪ್ರದೇಶಗಳಲ್ಲಿಯಂತೂ ಮಾಡುತ್ತಿದ್ದಾರೆ. ಸಾಲದ ವಸೂಲಿಯನ್ನು ಮುಂದಕ್ಕೆ ಹಾಕುತ್ತೇವೆಂದು ಸರ್ಕಾರದವರು ವಿರೋಧಪಕ್ಷದ ಮುಖಂಡರಿಗೆ ಮಾತು ಕೊಟ್ಟು ಒಂದು ತಿಂಗಳಾಯಿತು. ಆದರೆ ಇಲ್ಲಿಯವರೆಗೆ ಸರ್ಕಾರ ಇದರ ಬಗ್ಗೆ ಯಾವ ಒಂದು ನಿರ್ಣಯವನ್ನೂ ಸಹ ತೆಗೆದುಕೊಂಡಿಲ್ಲ. ಈ ಬಗ್ಗೆ ಸರ್ಕಾರ ಕೂಡಲೇ ಕ್ರಮ ತೆಗೆದುಕೊಳ್ಳದಿದ್ದರೆ, ನಾನು ಸರ್ಕಾರಕ್ಕೆ ಎಚ್ಚರಿಕೆ ಕೊಡುತ್ತಿದ್ದೇನೆ. ಏನೆಂದರೆ ೩೦ನೇ ತಾರೀಖಿನಿಂದ ರೈತರ ಒಂದು ಚಳುವಳಿ ಪುನ: ಪ್ರಾರಂಭವಾಗುತ್ತದೆ. ಆ ಒಂದು ಚಳುವಳಿ ಪ್ರಾರಂಭವಾಗಿ, ವಾತಾವರಣ ಹದಗೆಟ್ಟಮೇಲೆ ತಾವು ತೀರ್ಮಾನ ಕೈಕೊಳ್ಳುವುದಿದ್ದರೆ, ಅದು ಬೇರೆ ವಿಚಾರ. ಆದರೆ ಸರ್ಕಾರ ಈಗಾಗಲೇ ವಿರೋಧ ಪಕ್ಷದವರಿಗೆ ಮತ್ತು ರೈತರಿಗೆ ಏನು ಮಾತು ಕೊಟ್ಟಿತೋ, ಅದರಂತೆ ನಡೆದುಕೊಳ್ಳಬೇಕು. ಇಲ್ಲದಿದ್ದರೆ ಸರ್ಕಾರದವರು ರೈತರ ಚಳುವಳಿಯನ್ನು ಎದುರಿಸಬೇಕಾಗುತ್ತದೆ. ಆದಕಾರಣ ನಾನು ಎಷ್ಟು ದಿವಸಗಳಲ್ಲಿ ನಿರ್ಣಯ ತೆಗೆದುಕೊಳ್ಳುತ್ತೀರಾ ಎಂಬುದನ್ನು ತಿಳಿಸಬೇಕು.

ಶ್ರೀ ಬಿ.ವಿ. ಕಕ್ಕಿಲಾಯ.—ಈಗ ಮಾನ್ಯ ಬೊಮ್ಮಾಯಿ ಅವರು ಹೇಳಿದ್ದನ್ನು ನಾನು ಒಪ್ಪುತ್ತೇನೆ. ಈಗ ಬರಗಾಲ ಪ್ರದೇಶಗಳಲ್ಲಿ ಹಾಗೂ ಬೇರೆ ಕಡೆಗಳಲ್ಲಿ ಸಾಲದ ವಸೂಲಿ ಮಾಡುತ್ತಿದ್ದಾರೆ. ಅವರಿಗೆ ಹಣ ಪಾವಸ್ ಕೊಡುವ ಶಕ್ತಿ ಇದ್ದಾಗ, ಕೊಡುವ ಅಗತ್ಯವಿಲ್ಲವೆಂದು ಹೇಳಿದರು. ಆದರೆ ಈಗ ಎಲ್ಲವನ್ನೂ ಒಟ್ಟಿಗೆ ಬಲಾತ್ಕಾರದಿಂದ ವಸೂಲಿ ಮಾಡುವುದಕ್ಕೆ ಹೋದರೆ, ಅವರು ಎಲ್ಲಿಂದ ಕೊಡುತ್ತಾರೆ ಇದರ ಬದಲು ಸುಲಭ ರೀತಿಯಿಂದ ವಸೂಲಿ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕು.

ಶ್ರೀ ಜೆ. ಎಚ್. ಪಟೇಲ್.—ಇದರಲ್ಲಿ ಮಾನ್ಯ ಮಂತ್ರಿಗಳ ಜವಾಬ್ದಾರಿ ಇದೆ ಎಂದು ನಾನು ಹೇಳುವುದಿಲ್ಲ. ಆದರೆ ಮುಖ್ಯಮಂತ್ರಿಗಳು ವಿರೋಧಪಕ್ಷದವರನ್ನೆಲ್ಲಾ ಕರೆಸಿ ಮಾತನಾಡಿದಾಗ, ರಾಜಕೀಯವಾಗಿ ಹೆಸರು ಪಡೆಯುವುದಕ್ಕೋಸ್ಕರವಾಗಿ ರೈತರ ಸಾಲವನ್ನು ಬಿಡುತ್ತೇವೆಂದು ಹೇಳಿದರು. ಇದರ ಜೊತೆಗೆ ಮುಖ್ಯಮಂತ್ರಿಗಳು ರೈತರ ಮುಖಂಡರನ್ನು ಕರೆಸಿ ಮಾತನಾಡುವ ಕಾಲದಲ್ಲಿಯೂ ಸಹ ಸಾಲವನ್ನು ಬಿಡುತ್ತೇವೆಂದು ಹೇಳಿದರು. ಇಂತಹ ಒಂದು ವಾತಾವರಣವನ್ನು ನಿರ್ಮಾಣ ಮಾಡಿದ ನಂತರ ಏನಾಯಿತೆಂದರೆ, ಇವರು ಬಾಯಲ್ಲಿ ಹೇಳಿದ್ದೇ ಒಂದು, ಕೈಯಲ್ಲಿ

ಮಾಡಿದ್ದೇ ಒಂದು ಎಂಬಂತಾಯಿತು. ರಿಜರ್ವ್ ಬ್ಯಾಂಕ್‌ನವರು ಇವರ ತಲೆಮೇಲೆ ಕೂತು ಮಾರ್ಚಿ ತಿಂಗಳೊಳಗಾಗಿ ಇಷ್ಟು ಬಾಕಿ ವಸೂಲಿ ಮಾಡದೇ ಹೋದರೆ ನಾವು ಕೊಡುವ ಹಣವನ್ನು ನಿಲ್ಲಿಸುತ್ತೇವೆ ಮುಂದೆ ಕೊಡುವುದಿಲ್ಲವೆಂದು ಅವರು ಹೇಳಿದ ನಂತರ ನೀವು ಜಿಲ್ಲಾಧಿಕಾರಿಯವರಿಗೆ ಆದೇಶ ಕಳುಹಿಸಿದಿರಿ ಅದರ ಪ್ರಕಾರ ಅವರು ಸಾಲ ಕೊಡದಿದ್ದವರ ಮನೆಗಳಿಂದ ಪಾತ್ರೆಪಡಗಳನ್ನು ಜಪ್ತಿ ಮಾಡುತ್ತಿದ್ದಾರೆ. ಮಾನ್ಯ ಮಂತ್ರಿಗಳು ಬಡವರ ಹತ್ತಿರ ನಾವು ಹೋಗುತ್ತಿಲ್ಲ, ಯಾರು ಸಾಲ ವಾಪಸ್ ಕೊಡುವವರು ಇದ್ದಾರೋ, ಅಂತಹವರಿಂದ ಮಾತ್ರ ವಸೂಲಿ ಮಾಡುತ್ತಿದ್ದೇವೆಂದು ಹೇಳಿದರು ಆದರೆ ವಾಸ್ತವಿಕವಾಗಿ ಏನು ನಡೆಯುತ್ತಿದೆ ಎಂದರೆ, ಬಡ ರೈತರ ಮನೆಗಳಿಗೆ ನುಗ್ಗಿ ಸಾಲ ವಸೂಲಿ ಮಾಡುತ್ತಿದಾರೆ. ಇದನ್ನು ನಿಲ್ಲಿಸದಿದ್ದರೆ ರೈತರ ಚಳುವಳಿಯನ್ನು ಎದುರಿಸಬೇಕಾಗುತ್ತದೆಂದು ಮಾನ್ಯ ಬೊಮ್ಮಾಯಿ ಅವರು ಹೇಳಿದರು, ಆದರಂತೆ ನಿಮ್ಮ ಮನಸ್ಸಿನಲ್ಲಿ ಏನಾದರು ಈ ಸರ್ಕಾರ ಬಿದ್ದು ಹೋಗಲಿ ಎನ್ನುವುದಿದ್ದರೆ ಆ ಮಾತು ಬೇರೆ. ಅದು ಆಗುವುದು ನಿಶ್ಚಿತ. ಇಲ್ಲಿಯವರೆಗೆ ನಾವು ಸಮ್ಮನೆ ನಿಮ್ಮನ್ನು ಮತ್ತು ರೈತರನ್ನು ನೋಡುತ್ತಾ ಕೂತಿದ್ದೆವು. ರೈತರ ಚಳುವಳಿ ಏನಾದರು ಪ್ರಾರಂಭವಾದರೆ ನಾವೂ ಸಹ ಅವರ ಜೊತೆಯಲ್ಲಿ ಸೇರಿಕೊಳ್ಳಬೇಕಾಗುತ್ತದೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇನ್ನು ಎಷ್ಟು ದಿವಸಗಳಲ್ಲಿ ನಿರ್ಣಯ ತೆಗೆದುಕೊಳ್ಳುತ್ತೀರಿ ಎಂಬುದನ್ನು ತಿಳಿಸಬೇಕು.

ಶ್ರೀ ಎಚ್.ಸಿ. ಶ್ರೀಕಂಠಯ್ಯ.—ಆದಷ್ಟು ಬೇಗ ತೀರ್ಮಾನ ಕೈಕೊಳ್ಳುತ್ತೇವೆ. ತಾವು ಇದರ ಬಗ್ಗೆ ಸಂಕೋಚ ಪಡಬೇಕಾಗಿಲ್ಲ. ೮-೧೦ ದಿವಸಗಳಲ್ಲಿ ತೆಗೆದುಕೊಳ್ಳುತ್ತೇವೆ,

ಶ್ರೀ ಎಸ್ ಆರ್. ಬೊಮ್ಮಾಯಿ.—ಈಗಿನ ಕಾರ್ಯಕ್ರಮದ ಪ್ರಕಾರ ನಾವು ೨೮ನೇ ತಾರೀಖಿನ ವರೆಗೆ ಕೂರುತ್ತಿದ್ದೇವೆ. ಆದಕಾರಣ ಮಾನ್ಯ ಮಂತ್ರಿಗಳು ೨೫ನೇ ತಾರೀಖಿನದಿವಸ ಈ ಬಗ್ಗೆ ಹೇಳುತ್ತಾರೆಯೇ ಹೇಗೆ ?

ಅಧ್ಯಕ್ಷರು.—ಆದಷ್ಟು ಜಾಗ್ರತೆ ಎಂದು ಹೇಳಿದ್ದಾರೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಈ ಅಧಿವೇಶನ ಮುಕ್ತಾಯವಾಗುವುದರೊಳಗಾಗಿ ನಮಗೆ ಸರ್ಕಾರದಿಂದ ಹೇಳಿಕೆ ಬರಬೇಕು.

ಶ್ರೀ ಎಚ್.ಸಿ. ಶ್ರೀಕಂಠಯ್ಯ.—ಆಗಬಹುದು.

SRI AZEEZ SAIT.—Sir, I remember I had raised an issue in this House regarding group clashes in Shimoga District and the Chief Minister, I think, sent a committee headed by Sri Kagodu Thimmappa and the Committee had visited Shimoga and have prepared a report also. It has not been placed on the table of the House. It has not been done so far.

MR. SPEAKER.—I shall look into it. Next papers to be laid on the table.

PAPERS LAID ON THE TABLE

SR. M. VEERAPPA MOILY.—(Minister for Finance) (On behalf of the Chief Minister).—Sir, I beg to lay a copy of the inquest Report of S D.M., Ramanagaram about the death of Sri Eswaraiah in Kudlur Tank Channapatna Taluk as assured while replying to a Call Attention Notice during Third Session.

MR. SPEAKER.—Report laid.